"ಮಧುರ ಮಕ್ಕಳೇ - ತಂದೆಯ ಬಲಭುಜಗಳಾಗಿ ಸೇವೆಯ ಆಸಕ್ತಿಯನ್ನಿಟ್ಟುಕೊಂಡು ಶ್ರೀಮತದ ಮೇಲೆ ಪೂರ್ಣ ಗಮನವನ್ನಿಡಿ, ಪತ್ರಿಕೆಗಳಲ್ಲಿ ಯಾವುದೇ ಸೇವೆಯು ಮಾತು ಬಂದಿದ್ದರೆ ಅದನ್ನು ಓದಿ ಸೇವೆಯಲ್ಲಿ ತೊಡಗಬೇಕು"

ಪ್ರಶ್ನೆ: ತಂದೆಯ ಹೆಸರನ್ನು ನೀವು ಮಕ್ಕಳು ಯಾವಾಗ ಪ್ರಸಿದ್ಧ ಮಾಡುತ್ತೀರಿ?

ಉತ್ತರ: ಯಾವಾಗ ನಿಮ್ಮ ಚಲನೆಯು ಬಹಳ ಘನತೆ ಮತ್ತು ಗಂಭೀರತೆಯಿಂದ ಇರುವುದು. ನೀವು ಶಕ್ತಿಯರ ಚಲನೆಯು ನವಿಲಿನ ತರಹ ಇರಬೇಕು. ನಿಮ್ಮ ಬಾಯಿಂದ ಸದಾ ಜ್ಞಾನರತ್ನಗಳೇ ಬರಬೇಕು, ಕಲ್ಲುಗಳಲ್ಲ. ಕಲ್ಲುಗಳನ್ನು ಹೊರಹಾಕುವವರು ಹೆಸರು ಹಾಳು ಮಾಡುತ್ತಾರೆ ನಂತರ ಅವರ ಹೆಸರೂ ಸಹ ಭ್ರಷ್ಟವಾಗಿಬಿಡುತ್ತದೆ. ತಂದೆಯ ಮಕ್ಕಳಾಗಿ ಯಾವುದೇ ವಿಕರ್ಮವಾಗಬಾರದು- ಈ ಮಾತಿನ ಮೇಲೆ ಪೂರ್ಣ ಗಮನವನ್ನಿಡಬೇಕು.

ಗೀತೆ: ಆಕಾಶ ಸಿಂಹಾಸನವನ್ನು ಬಿಟ್ಟು ಬಾ..........

ಓಂ ಶಾಂತಿ. ಮಕ್ಕಳು ಗೀತೆಯನ್ನು ಕೇಳಿದಿರಿ! ಹೇ ಪರಮಪಿತ ಪರಮಾತ್ಮ ನಿರಾಕಾರ ರೂಪವನ್ನು ಬದಲಾಯಿಸಿಕೊಂಡು ಸಾಕಾರದಲ್ಲಿ ಬಂದುಬಿಡಿ ಎಂದು ನೆನಪು ಮಾಡುತ್ತಾರೆ. ಅವರು ಯಾವ ರೂಪವನ್ನು ಬದಲಾಯಿಸಬಹುದು! ಮೀನು-ಮೊಸಳೆಯ ರೂಪವನ್ನು ಧರಿಸಿ ಬನ್ನಿ ಎಂದು ಹೇಳುವುದಿಲ್ಲ. ಇದು ಪಾಪಾತ್ಮರ ಪ್ರಪಂಚವಾಗಿದೆ, ಪಾವನರನ್ನಾಗಿ ಮಾಡುವುದಕ್ಕಾಗಿ ಕರೆಯುತ್ತಾರೆ. ಒಂದುವೇಳೆ ಸರ್ವವ್ಯಾಪಿಯಾಗಿದ್ದರೆ ಮತ್ತೆ ಯಾರನ್ನು ಕರೆಯುತ್ತಾರೆ? ಈಗ ಈ ಗೀತೆಯಂತೂ ರೇಡಿಯೋಗಳಲ್ಲಿಯೂ ಬರುತ್ತದೆ ಆದರೆ ಯಾರೂ ತಿಳಿದುಕೊಂಡಿಲ್ಲ. ಈಗ ನೀವು ಮಕ್ಕಳಂತೂ ಪತ್ರಿಕೆ ಮುಂತಾದುವುಗಳನ್ನು ಓದುವುದಿಲ್ಲ. ಭಲೆ ಓದುವವರು, ಬರೆಯುವವರಿದ್ದೀರಿ ಆದರೆ ಪತ್ರಿಕೆಗಳನ್ನು ಓದುವ ಅಭ್ಯಾಸವಿಲ್ಲ ಬಾಕಿ ಈ ಗೋಪರಿದ್ದಾರೆ, ಅವರಲ್ಲಿಯೂ ಕೆಲವರಿಗೆ ಯಾವ ರೀತಿಯಲ್ಲಿ ಪತ್ರಿಕೆಯಿಂದ ಸರ್ವೀಸಿನ ಮಾರ್ಗವನ್ನು ಹುಡುಕುವುದೆಂದು ಸರ್ವೀಸಿನ ಆಸಕ್ತಿಯಿರುತ್ತದೆ. ಬ್ರಾಹ್ಮಣ ಕುಲಭೂಷಣರಂತೂ ಅನೇಕರಿದ್ದಾರೆ ಆದರೆ ಅವರಲ್ಲಿಯೂ ಕೋಟಿಯಲ್ಲಿಯೂ ಕೆಲವರಷ್ಟೇ ಪತ್ರಿಕೆಯಲ್ಲಿ ಓದಿ ತಕ್ಷಣ ಸರ್ವೀಸಿನಲ್ಲಿ ತೊಡಗುತ್ತಾರೆ. ತಂದೆಯು ಮಾತೆಯರನ್ನು ಬಲಭುಜಗಳನ್ನಾಗಿ ಮಾಡಿಕೊಂಡಿದ್ದಾರೆ. ಗೋಪರು ಕೆಲವರಷ್ಟೆ ನಿಲ್ಲುತ್ತಾರೆ, ಕೆಲವರು ವಿರಳವಾಗಿ ಯಥಾರ್ಥ ರೀತಿಯಿಂದ ಶ್ರೀಮತದ ಮೇಲೆ ಗಮನ ಕೊಡುತ್ತಾರೆ. ಈ ಒಂದು ವಿಷಯವು ಭ್ರಷ್ಟಾಚಾರಿ ಮತ್ತು ಶ್ರೇಷ್ಠಾಚಾರಿಗಳದ್ದಾಗಿದೆ. ಭ್ರಷ್ಟಾಚಾರಿಗಳು ಹೇ ಭಗವಂತನೇ ಬನ್ನಿ, ಬಂದು ಶ್ರೇಷ್ಠಾಚಾರಿಗಳನ್ನಾಗಿ ಮಾಡಿ ಎಂದು ಕರೆಯುತ್ತಾರೆ. ಎಲ್ಲರೂ ಅವಶ್ಯವಾಗಿ ಭ್ರಷ್ಟಾಚಾರಿಗಳಾಗಿದ್ದಾರೆ. ಯಥಾ ರಾಜ-ರಾಣಿ ತಥಾ ಪ್ರಜಾ ಎಂದು ಹೇಳುತ್ತಾರೆ. ಯಥಾ ರಾಜಾ-ರಾಣಿ ಎಂದರೆ ಸರ್ಕಾರವು ಹೇಗೋ ಹಾಗೆಯೇ ಪ್ರಜೆಗಳು ಅಂದರೆ ಮಕ್ಕಳಿಗೆ ತಿಳಿಸಲಾಗಿದೆ- ಭಾರತವು ಸದಾ ಶ್ರೇಷ್ಠಾಚಾರಿಯಾಗಿತ್ತು, ಸ್ವರ್ಗವಾಗಿತ್ತು. ಒಂದುವೇಳೆ ಸ್ವರ್ಗದಲ್ಲಿಯೂ ಭ್ರಷ್ಟಾಚಾರಿಗಳಿದ್ದರೆ ಅದನ್ನು ಸ್ವರ್ಗವೆಂದು ಹೇಗೆ ಕರೆಯಲಿ? ಸ್ವರ್ಗದ ಸ್ಥಾಪನೆಯನ್ನು ಅವಶ್ಯವಾಗಿ ತಂದೆಯೇ ಮಾಡುತ್ತಾರೆ, ಅವರನ್ನೇ ಎಲ್ಲರೂ ನೆನಪು ಮಾಡುತ್ತಾರೆ. ಭ್ರಷ್ಟಾಚಾರಿಗಳೇ ಕರೆಯುತ್ತಾರೆ, ಶ್ರೇಷ್ಠಾಚಾರಿಗಳೆಂದೂ ಕರೆಯುವುದಿಲ್ಲ. ಭಾರತವು ಬಹಳ ಶ್ರೇಷ್ಠಾಚಾರಿಯಾಗಿತ್ತು, ಸ್ವರ್ಗವಾಗಿತ್ತು ಈಗಂತೂ ನರಕವಾಗಿದೆ. ಅಂದಮೇಲೆ ನರಕದಲ್ಲಿ ಅವಶ್ಯವಾಗಿ ಭ್ರಷ್ಟಾಚಾರಿಗಳೇ ಇರುತ್ತಾರೆ. ಇಲ್ಲಿ ಶ್ರೇಷ್ಠಾಚಾರಿಗಳು ಯಾರಿದ್ದಾರೆಂದು ತೋರಿಸಿ, ನೀವು ಚಿತ್ರಗಳನ್ನು ತೋರಿಸಬಹುದು- ಅವಶ್ಯವಾಗಿ ಸತ್ಯಯುಗದಲ್ಲಿ ಯಥಾ ಪ್ರಜೆಗಳು, ಈ ಲಕ್ಷ್ಮೀ-ನಾರಾಯಣರು ನೋಡಿ ಶ್ರೇಷ್ಠಾಚಾರಿಗಳಾಗಿದ್ದಾರಲ್ಲವೆ. ಹೆಸರೇ ಸ್ವರ್ಗವಾಗಿದೆ, ದ್ವಾಪರದಲ್ಲಿ ಇಂತಹ ಶ್ರೇಷ್ಠಾಚಾರಿ ರಾಜ-ರಾಣಿಯರ ಮಂದಿರವನ್ನು ಮಾಡಿ ಪೂಜೆ ಮಾಡುತ್ತಾರೆ ಅಂದಾಗ ಅವಶ್ಯವಾಗಿ ಭ್ರಷ್ಟಾಚಾರಿಗಳಾಗಿದ್ದಾರೆ. ತಮ್ಮನ್ನು ತಾವು ಭ್ರಷ್ಟಾಚಾರಿಗಳು, ಕಾಮಿ, ಕ್ರೋಧಿ, ಪಾಪಿಗಳಾಗಿದ್ದೇವೆ, ಮತ್ತು ತಾವು ಸರ್ವಗುಣ ಸಂಪನ್ನರೆಂದು ಹೇಳುತ್ತಾರೆ. ಭಾರತದಲ್ಲಿ ಭ್ರಷ್ಟಾಚಾರಿಗಳು ಶ್ರೇಷ್ಠಾಚಾರಿಗಳ ಮಹಿಮೆ ಮಾಡುತ್ತಾರೆ. ಭ್ರಷ್ಟಾಚಾರಿ ರಾಜರ ಬಳಿ ಶ್ರೇಷ್ಠಾಚಾರಿ ದೇವತೆಗಳ ಮಂದಿರವಿದೆ. ಮಹಿಮೆಯನ್ನು ಹಾಡುತ್ತಿರುತ್ತಾರೆ, ವಂದನೆ, ಪೂಜೆಯನ್ನು ಮಾಡುತ್ತಿರುತ್ತಾರೆ. ತಂದೆಯು ಹೇಳುತ್ತಾರೆ- ಧರ್ಮಸ್ಥಾಪನಾರ್ಥವಾಗಿ ಮೇಲಿಂದ ಯಾವ ಆತ್ಮಗಳು ಬರುತ್ತಾರೆಯೋ ಅವರು ಅವಶ್ಯವಾಗಿ ಸತೋಪ್ರಧಾನ ಶ್ರೇಷ್ಠಾಚಾರಿಗಳಾಗಿರುತ್ತಾರೆ. ಭಲೆ ಮಾಯೆಯ ರಾಜ್ಯವಾಗಿರಬಹುದು ಆದರೆ ಮೊದಲು ಬರುವವರು ಅವಶ್ಯವಾಗಿ ಸತೋಪ್ರಧಾನರಾಗಿರುತ್ತಾರೆ ಆದ್ದರಿಂದಲೇ ಅವರ ಮಹಿಮೆಯಾಗುತ್ತದೆ ನಂತರ ಸತೋ, ರಜೋ, ತಮೋದಲ್ಲಿ ಬರುತ್ತಾರೆ. ದೇವತೆಗಳೂ ಸಹ ಶ್ರೇಷ್ಠಾಚಾರಿಗಳಾಗಿದ್ದರು, ಪ್ರತಿಯೊಬ್ಬರೂ ಸತೋ, ರಜೋ, ತಮೋದಲ್ಲಿ ಬರಲೇಬೇಕಾಗುತ್ತದೆ, ಭ್ರಷ್ಟಾಚಾರಿಗಳಾಗಲೇಬೇಕು. ಕೆಲವು ಸಂಸ್ಥೆಗಳು ಭ್ರಷ್ಟಾಚಾರವನ್ನು ನಿಲ್ಲಿಸುವ ಪುರುಷಾರ್ಥ ಮಾಡುತ್ತವೆ ಎಂದು ಪತ್ರಿಕೆಗಳಲ್ಲಿ ಬರುತ್ತದೆ. ಈಗ ಶ್ರೇಷ್ಠಾಚಾರಿ ಮಂದಿರಗಳನ್ನು ಕಟ್ಟಿಸಿ ಪೂಜೆ ಮಾಡುತ್ತಾ ಬಂದಿದ್ದೀರಿ. ತಾವೇ ಪೂಜ್ಯ ಶ್ರೇಷ್ಠಾಚಾರಿಗಳಾಗಿದ್ದಿರಿ, ಮತ್ತೆ ತಾವೇ ಪೂಜಾರಿ ಭ್ರಷ್ಟಾಚಾರಿಗಳಾಗಿದ್ದೀರಿ, ಈಗ ನೀವು ಬರೆಯಬಹುದು- ಯಥಾ ರಾಜಾ-ರಾಣಿ ತಥಾ ಪ್ರಜಾ ಸತ್ಯಯುಗದಲ್ಲಿ ಶ್ರೇಷ್ಠಾಚಾರಿಗಳಾಗಿದ್ದರು, ನಿರ್ವಿಕಾರಿ ಪ್ರಪಂಚವಾಗಿತ್ತು. ನಂತರದಲ್ಲಿ ಕಲೆಗಳು ಕಡಿಮೆಯಾಗುತ್ತಾ ಭಾರತವು ಕೆಳಗಿಳಿಯಲೇಬೇಕಾಗಿದೆ. ಈ ಆಟವೇ ಭಾರತದ ಮೇಲಿದೆ. ಭಾರತವು ಅರ್ಧಕಲ್ಪ ಶ್ರೇಷ್ಠಾಚಾರಿಯಾಗಿತ್ತು, ಸದಾ

ಏಕರಸವಾಗಿಯೂ ಇರುವುದಿಲ್ಲ. 16 ಕಲೆಗಳಿಂದ 14 ಕಲೆಗಳಲ್ಲಿ ಬರಲೇಬೇಕಾಗಿದೆ. ನಿಧಾನ-ನಿಧಾನವಾಗಿ ಕಲೆಗಳು ಕಡಿಮೆಯಾಗುತ್ತಾ ಹೋಗುತ್ತವೆ, ತಮೋಪ್ರಧಾನ ಆಗಿಬಿಡುತ್ತಾರೆ. ತಂದೆಯು ತಿಳಿಸುತ್ತಾರೆ- ಯಾವಾಗ ಭ್ರಷ್ಟಾಚಾರವಾಗುತ್ತದೆಯೋ ಆಗ ನಾನು ಬರುತ್ತೇನೆ. ಪತಿತರಿಗೆ ಭ್ರಷ್ಟಾಚಾರಿ, ಪಾವನರಿಗೆ ಶ್ರೇಷ್ಠಾಚಾರಿ ಎಂದು ಹೇಳಲಾಗುತ್ತದೆ. ಇದಂತೂ ಅವಶ್ಯವಾಗಿ ತಿಳಿದುಕೊಳ್ಳುವ ಮಾತುಗಳಾಗಿವೆ.

ಶ್ರೀಮದ್ಭಗವದ್ಗೀತೆ ಎಂದು ಹೇಳಲಾಗುತ್ತದೆ. ಶ್ರೀಮತವು ಏನು ಮಾಡುತ್ತದೆ? ಅದಂತೂ ಶ್ರೇಷ್ಠರಾಜರಿಗಿಂತ ರಾಜರನ್ನಾಗಿ ಮಾಡುತ್ತದೆ. ಈ ಮಾಯೆಯ ಮೇಲೆ ವಿಜಯ ಪಡೆದರೆ ನೀವು ರಾಜ-ರಾಣಿಯರಾಗುತ್ತೀರಿ ಎಂದು ಹೇಳುತ್ತಾರೆ. ಲೆಕ್ಕ ಮಾಡಬೇಕಾಗಿದೆ- ಕ್ರೈಸ್ತನಿಗಿಂತ 3000 ವರ್ಷಗಳ ಮೊದಲು ಭಾರತವು 16 ಕಲಾ ಸಂಪೂರ್ಣ ಶ್ರೇಷ್ಠಾಚಾರಿಯಾಗಿತ್ತು. ಭಾರತವು ಚಿನ್ನದ ಪಕ್ಷಿಯಾಗಿತ್ತು. ಯಥಾ ರಾಜಾ-ರಾಣಿ ತಥಾ ಸ್ವರ್ಗದಲ್ಲಿ ಸುಖಿಯಾಗಿದ್ದರು ನಂತರ ಯಾವಾಗ ರಾವಣರಾಜ್ಯ ಪ್ರಾರಂಭವಾಗುತ್ತದೆಯೋ ಆಗ ಭ್ರಷ್ಟಾಚಾರಿಗಳಾಗತೊಡಗುತ್ತಾರೆ. ತಮ್ಮ ಅಧಿಕಾರಿಗಳಲ್ಲಿ ಭ್ರಷ್ಟಾಚಾರವಿದೆ ಎಂದು ತಾವೇ ಹೇಳುತ್ತಾರೆ. ಪ್ರಜೆಗಳಲ್ಲಿ ಭ್ರಷ್ಟಾಚಾರವಿದೆ ಎಂದು ಹೇಳಲು ಈ ಸಮಯದಲ್ಲಿ ರಾಜ-ರಾಣಿಯರಂತೂ ಇಲ್ಲ. ಇಲ್ಲಂತೂ ಪ್ರಜೆಗಳ ಮೇಲೆ ಪ್ರಜೆಗಳ ರಾಜ್ಯವಿದೆ. ಮೊದಲಂತೂ ಸರ್ಕಾರವು ಶ್ರೇಷ್ಠಾಚಾರಿಯಾಗಬೇಕು. ಅದನ್ನು ಮಾಡುವವರು ಯಾರು? ಈಗ ನೀವು ಬಡಮಕ್ಕಳೇ ನಂಬರ್‌ವನ್ ಶ್ರೇಷ್ಠಾಚಾರಿಗಳಾಗುತ್ತಿದ್ದೀರಿ. ತಂದೆಯು ತಿಳಿಸುತ್ತಿದ್ದಾರೆ- ನಾನು ಬಂದು ಎಲ್ಲರನ್ನೂ ಶ್ರೇಷ್ಠಾಚಾರಿಗಳನ್ನಾಗಿ ಮಾಡುತ್ತೇನೆ, ಡ್ರಾಮಾನುಸಾರ ಈ ಎಲ್ಲಾ ಆಟವು ಮಾಡಲ್ಪಟ್ಟಿದೆ. ಕಲ್ಪದ ನಂತರವೂ ಇದೇ ಗೀತಾಚಿತ್ರ ಮುಂತಾದವುಗಳು ರಚಿಸಲ್ಪಡುತ್ತವೆ. ಈಗ ಬಂಗಾಳದಲ್ಲಿ ಕಾಳಿಯ ಮಂದಿರವಿದೆ. ಕಾಳಿ, ತಾಯಿ-ತಾಯಿ ಎಂದು ಹೇಳಿ ಪ್ರಾಣವನ್ನು ಕೊಡುತ್ತಾರೆ. ಇಂತಹ ಕಾಳಿಯ ಅಥವಾ ಚಂಡಿಕಾದೇವಿ ಎಲ್ಲಿಂದ ಬಂದರು? ಹೆಸರಂತೂ ನೋಡಿ ಹೇಗಿದೆ. ಇಲ್ಲಿಂದ ಯಾರು ಓಡಿಹೋಗುತ್ತಾರೆ ಅವರಂತೂ ಪ್ರಜೆಗಳಲ್ಲಿ ಚಂಡಾಲರಾಗುತ್ತಾರೆ. ಆದರೆ ಯಾರು ಇಲ್ಲಿದ್ದರೂ ಸಹ ವಿಕರ್ಮ ಇತ್ಯಾದಿಗಳನ್ನು ಮಾಡುತ್ತಾರೆಯೋ ಅವರು ಶ್ರೀಮಂತ ಮನೆತನದ ಚಂಡಾಲರಾಗುತ್ತಾರೆ. ಆದರೂ ಸಹ ಅಂತ್ಯದಲ್ಲಿ ಅವರಿಗೆ ಕಿರೀಟವು ಸಿಕ್ಕಿಬಿಡುತ್ತದೆ ಏಕೆಂದರೆ ಇಲ್ಲಿ ಮಡಿಲಂತೂ ತೆಗೆದುಕೊಳ್ಳುತ್ತಾರಲ್ಲವೆ ಆದ್ದರಿಂದ ಚಂಡಿಕಾದೇವಿಯ ಪೂಜೆಯಾಗುತ್ತದೆ. ಜ್ಞಾನವಂತೂ ಬಹಳ ಗುಹ್ಯವಾಗಿದೆ ಆದರೆ ಅದನ್ನು ಧಾರಣೆ ಮಾಡಿದಾಗ ಮಾತ್ರ. ಹೇಗೆ ಕೆಲವರು ಬ್ಯಾರಿಸ್ಟರ್ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸುತ್ತಾರೆ. ಇನ್ನೂ ಕೆಲವರು ಧರಿಸಿರುವ ಕೋಟ್ ಸಹ ಹರಿದಿರುತ್ತದೆ. ಇದಂತೂ ಬೇಹದ್ದಿನ ವಿದ್ಯೆಯಾಗಿದೆ. ತಂದೆಯು ವಿಸ್ತಾರದಲ್ಲಿ ಯಾವ ಜ್ಞಾನವನ್ನು ತಿಳಿಸಿದ್ದಾರೆ ಅದನ್ನು ಸಾರರೂಪದಲ್ಲಿ ತಂದು 5 ನಿಮಿಷಗಳ ಭಾಷಣ ಮಾಡಿ ಪತ್ರಿಕೆಗಳಲ್ಲಿ ಹಾಕಬೇಕು. ಇದನ್ನೂ ಸಹ ಕೇಳಬೇಕು- ಹಿಂದೂ ಧರ್ಮವನ್ನು ಯಾರು ಸ್ಥಾಪನೆ ಮಾಡಿದರು? ಆಗ ಯಾರೂ ತಿಳಿಸುವುದಿಲ್ಲ. ಏಕೆಂದರೆ ಏನೂ ಗೊತ್ತಿಲ್ಲ. ನೀವು ಶಕ್ತಿಯರ ಚಲನೆಯು ಈ ರೀತಿ ಗಂಭೀರವಾಗಿರಬೇಕು ಹೇಗೆ ನವಿಲು ನಡೆಯುವಂತೆ ಇರಬೇಕು. ಬಾಯಿಂದ ರತ್ನಗಳೇ ಬರಬೇಕು, ಕಲ್ಲುಗಳಲ್ಲ. ಮನುಷ್ಯರಂತೂ ಕಲ್ಲುಗಳನ್ನೇ ಹೊಡೆಯುತ್ತಾರೆ ಆದರೆ ನೀವು ಎಂದೂ ಕಲ್ಲುಗಳನ್ನು ಹೊಡೆಯಬಾರದು, ಹೆಸರನ್ನು ಕೆಡಿಸಬಾರದು. ಒಳ್ಳೆಯದು.

ರಾತ್ರಿಯ ತರಗತಿ:-

ಇಲ್ಲಿ ಒಳ್ಳೆಯ-ಕೆಟ್ಟ ಮನುಷ್ಯರಿದ್ದಾರೆ ಆದರೆ ಸತ್ಯಯುಗದಲ್ಲಿ ಇಂತಹ ಶಬ್ಧವೇ ಬರುವುದಿಲ್ಲ. ಕೆಟ್ಟ ಅಥವಾ ಪಾಪಾತ್ಮ ಎಂಬ ಶಬ್ಧವೇ ಬರುವುದಿಲ್ಲ. ಅದು ನಿರ್ವಿಕಾರಿ ಪ್ರಪಂಚವಾಗಿದೆ. ಮಕ್ಕಳಿಗೆ ಗೊತ್ತಿದೆ- ನಾವು ವಿಶ್ವದ ಮಾಲೀಕರಾಗಿದ್ದೆವು, ಈ ಭಾರತವು ದೇವಿ-ದೇವತೆಗಳ ರಾಜಾಸ್ಥಾನವಾಗಿತ್ತು ಈಗ ಹಳೆಯದಾಗಿದೆ. ಇದು ಸಂಗಮಯುಗವಾಗಿದೆ, ಈಗ ಇಲ್ಲಿಂದ ದೋಣಿಯನ್ನು ಪ್ರಾರಂಭ ಮಾಡಲಾಗಿದೆ. ನಾವು ಈ ಪ್ರಪಂಚದಿಂದ ದೂರ ಹೋಗುತ್ತೇವೆ ಎಂದು ಮನುಷ್ಯರಿಗೆ ಗೊತ್ತಿಲ್ಲ. ತಂದೆಯು ಅಂಬಿಗನಾಗಿದ್ದಾರೆ. ಈ ದೋಣಿಯನ್ನು ದೂರ ಕರೆದೊಯ್ಯುತ್ತಾರೆ. ನಾವು ಬಹಳ ಪೆಟ್ಟುತಿಂದು ಮೋಸಹೋಗಿದ್ದೇವೆಂದು ಮಕ್ಕಳ ಬುದ್ಧಿಯಲ್ಲಿದೆ ಆದರೆ ನಾವು ಮೋಸ ಹೋಗುತ್ತೇವೆಂದು ಭಕ್ತರಿಗೆ ಗೊತ್ತಿಲ್ಲ. ಅವರಂತೂ ದೂರ-ದೂರ ಹೋಗುತ್ತಾರೆ, ನೀವು ಮಕ್ಕಳು ಕೇವಲ ನೆನಪು ಮಾಡಬೇಕಾಗಿದೆ. ನಾವು ನೆನಪು ಮಾಡಿ ಸುಸ್ತಾಗುತ್ತೇವೆ ಎಂದಲ್ಲ ಆದರೆ ಮಾಯೆಯು ವಿಘ್ನಗಳನ್ನು ಹಾಕುತ್ತದೆ ಆತ್ಮವೇ ಪರಮಾತ್ಮನ ಪ್ರಿಯತಮೆಯಾಗುತ್ತದೆ. ಪರಮಾತ್ಮನೇ ಪ್ರಿಯತಮನಾಗಿದ್ದಾರೆ ಎಂದು ಯಾರೂ ತಿಳಿದುಕೊಂಡಿಲ್ಲ ಅಂದಾಗ ಮಕ್ಕಳಲ್ಲಿಯೂ ಕೆಲವರು ಪ್ರಿಯತಮೆಯರು ಪ್ರಿಯತಮನನ್ನು ನೆನಪು ಮಾಡುತ್ತಾರೆ. ನಾವು ನಿರಂತರ ನೆನಪು ಮಾಡುತ್ತಾ ಇರಬೇಕೆಂದು ಪುರುಷಾರ್ಥ ಮಾಡಬೇಕು. ಸ್ಮರಣೆ ಶಬ್ಧವು ಭಕ್ತಿಮಾರ್ಗದ್ದಾಗಿದೆ. ನಾವು ತಂದೆಯನ್ನು ನೆನಪು ಮಾಡುತ್ತೇವೆ. ನೆನಪು ಎಂಬ ಶಬ್ಧವು ಪ್ರವೃತ್ತಿಮಾರ್ಗದ್ದಾಗಿದೆ, ಬಹಳ ಮಧುರವೂ ಆಗಿದೆ. ನಾವು ಮರೆತುಹೋಗುತ್ತೇವೆ ಎಂದು ಹೇಳುತ್ತಾರೆ. ಅರೆ! ನಾನು ತಂದೆಯನ್ನು ಮರೆತುಹೋಗುತ್ತೇನೆಂದು ಮಗು ಹೇಳಲು ಸಾಧ್ಯವೇ! ನೆನಪಂತೂ ತುಂಬಾ ಒಳ್ಳೆಯದಾಗಿದೆ. ತಮ್ಮೊಂದಿಗೆ ತಾವು ಮಾತನಾಡಿಕೊಳ್ಳಬೇಕು- ನೀವು ಮಾತ್ಪಿತಾರವರ ಸನ್ಮುಖದಲ್ಲಿ ಕುಳಿತಿದ್ದೀರಿ. ಖುಷಿಯೂ ಆಗಬೇಕು- ಯಾರಿಗಾಗಿ ನೀವು ಮಾತಪಿತಾ ನಾವು ನಿಮ್ಮ ಬಾಲಕರು ಎಂದು ಹೇಳುತ್ತಿದ್ದಿರಿ ಅವರಿಂದ ಅವಶ್ಯವಾಗಿ ಆಸ್ತಿಯನ್ನು ಪಡೆಯುತ್ತಿದ್ದೀರಿ. ನೆನಪಿನದೇ ಪರಿಶ್ರಮವಿದೆ. ನಿಮ್ಮದು ಬಹಳ ದೊಡ್ಡ ಸಂಪಾದನೆಯಾಗಿದೆ, ಬಹಳ ದೊಡ್ಡ ಪ್ರಾಪ್ತಿಯಾಗಿದೆ ಅಂದಮೇಲೆ ಕೇವಲ ಮೌನವಾಗಿದ್ದು ನೆನಪು ಮಾಡಬೇಕಾಗಿದೆ. ಒಳ್ಳೆಯದು. ಶುಭರಾತ್ರಿ.

2- ನೀವು ಬ್ರಾಹ್ಮಣ ಮಕ್ಕಳನ್ನು ಬಿಟ್ಟರೆ ಬೇರೆ ಯಾರಿಗೂ ಸಂಗಮಯುಗವು ಯಾವಾಗಿರುತ್ತದೆ ಎಂದು ತಿಳಿದಿಲ್ಲ. ಈ ಕಲ್ಪದ ಸಂಗಮಯುಗದ ಮಹಿಮೆ ಬಹಳ ಇದೆ. ತಂದೆ ಬಂದು ರಾಜಯೋಗವನ್ನು ಕಲಿಸುತ್ತಾರೆ. ಸತ್ಯಯುಗಕ್ಕೆ ಅವಶ್ಯವಾಗಿ ಸಂಗಮಯುಗವು ಬರುವುದು. ಮನುಷ್ಯರೇ ಇದ್ದಾರೆ. ಅವರಲ್ಲಿ ಕೆಲವರು ಕನಿಷ್ಠರು, ಕೆಲವರು ಉತ್ತಮರಾಗಿದ್ದಾರೆ. ಅವರ ಮುಂದೆ ಮಹಿಮೆಯನ್ನು ಹಾಡುತ್ತಾರೆ ನೀವು ಪುರುಷೋತ್ತಮರು, ನಾವು ಕನಿಷ್ಠರು. ತಾವೇ ತಿಳಿಸುತ್ತಾರೆ ನಾನು ಹೀಗಿದ್ದೇನೆ, ಹೀಗಿದ್ದೇನೆ.

ಈಗ ಈ ಪುರುಷೋತ್ತಮ ಸಂಗಮಯುಗವನ್ನು ನೀವು ಬ್ರಾಹ್ಮಣರನ್ನು ಬಿಟ್ಟರೆ ಬೇರೆ ಯಾರು ತಿಳಿದುಕೊಂಡಿಲ್ಲ. ಇದರ ಜಾಹೀರಾತನ್ನು ಹೇಗೆ ಮಾಡುವುದು ಯಾವುದರಿಂದ ಮನುಷ್ಯರಿಗೆ ಗೊತ್ತಾಗಬೇಕು. ಸಂಗಮಯುಗದಲ್ಲಿ ಭಗವಂತನೇ ಬಂದು ರಾಜಯೋಗವನ್ನು ಕಲಿಸುತ್ತಾರೆ. ನೀವು ತಿಳಿದುಕೊಂಡಿದ್ದೀರಿ ನಾವು ರಾಜಯೋಗವನ್ನು ಕಲಿಯುತ್ತಿದ್ದೇವೆ. ಈಗ ಇಂತಹ ಯಾವ ಯುಕ್ತಿಯನ್ನು ರಚಿಸುವುದರಿಂದ ಮನುಷ್ಯರಿಗೆ ಗೊತ್ತಾಗುವುದು. ಆದರೆ ನಿಧಾನವಾಗಿ ಆಗುತ್ತದೆ. ಈಗ ಸಮಯವಿದೆ. ಬಹಳಷ್ಟು ಕಳೆದುಹೋಯಿತು ಸ್ವಲ್ಪ ಉಳಿದುಕೊಂಡಿದೆ... ನಾವು ಹೇಳುತ್ತೇವೆಂದರೆ ಮನುಷ್ಯರು ಬೇಗನೆ ಪುರುಷಾರ್ಥ ಮಾಡುವರು. ಇಲ್ಲವೆಂದರೆ ಜ್ಞಾನವು ಸೆಕೆಂಡಿನಲ್ಲಿ ಸಿಗುವುದು, ಯಾವುದರಿಂದ ನೀವು ಆ ಸಮಯ ಸೆಕೆಂಡಿನಲ್ಲಿ ಜೀವನಮುಕ್ತಿ ಪಡೆದುಕೊಳ್ಳುವಿರಿ. ಆದರೆ ನಿಮ್ಮ ತಲೆಯ ಮೇಲೆ ಅರ್ಧಕಲ್ಪದ ಪಾಪವಿದೆ, ಅದು ಸೆಕೆಂಡಿನಲ್ಲಿ ಕಟಾಗುವುದಿಲ್ಲ. ಇದರಲ್ಲಿ ಸಮಯ ಹಿಡಿಸುತ್ತದೆ. ಮನುಷ್ಯರು ತಿಳಿಯುತ್ತಾರೆ ಈಗಂತು ಸಮಯವಿದೆ, ಈಗಲೇ ನಾವು ಬ್ರಹ್ಮಾಕುಮಾರಿಯರ ಹತ್ತಿರ ಏಕೆ ಹೋಗಬೇಕು. ಅದೃಷ್ಟದಲ್ಲಿಲ್ಲವೆಂದರೆ ಸಾಹಿತ್ಯದಿಂದಲೂ ಉಲ್ಬಾನೇ ತೆಗೆದುಕೊಳ್ಳುತ್ತಾರೆ. ನೀವು ತಿಳಿದುಕೊಳ್ಳುತ್ತೀರಿ ಇದು ಪುರುಷೋತ್ತಮರಾಗುವ ಯುಗವಾಗಿದೆ. ವಜ್ರದ ಸಮಾನ ಗಾಯನವಿದೆ. ನಂತರ ಕಡಿಮೆಯಾಗುತ್ತದೆ. ಸ್ವರ್ಣಿಮಯುಗ, ಬೆಳ್ಳಿಯುಗ. ಈ ಸಂಗಮಯುಗವು ವಜ್ರದ ಯುಗವಾಗಿದೆ. ಸತ್ಯಯುಗ ಸ್ವರ್ಣಿಮಯುಗವಾಗಿದೆ. ನೀವು ತಿಳಿದುಕೊಂಡಿದ್ದೀರಿ ಸ್ವರ್ಗಕ್ಕಿಂತಲೂ ಈ ಸಂಗಮ ಚೆನ್ನಾಗಿದೆ, ವಜ್ರ ಸಮಾನ ಜನ್ಮವಾಗಿದೆ. ಅಮರಲೋಕದ ಗಾಯನವಿದೆಯಲ್ಲವೇ. ನಂತರ ಕಡಿಮೆಯಾಗುತ್ತಾ ಹೋಗುತ್ತದೆ. ಇದನ್ನು ಸಹ ಬರೆಯಬಹುದು ಪುರುಷೋತ್ತಮ ಸಂಗಮಯುಗವು ವಜ್ರ, ಸತ್ಯಯುಗವಾಗಿದೆ ಸ್ವರ್ಣಿಮ, ತ್ರೇತಾವಾಗಿದೆ ಬೆಳ್ಳಿ. ಇದನ್ನು ಸಹ ನೀವು ತಿಳಿಸಬಹುದು - ಸಂಗಮದಲ್ಲಿಯೇ ನಾವು ಮನುಷ್ಯರಿಂದ ದೇವತೆಗಾಳಾಗುತ್ತೇವೆ. ಅಷ್ಟ ರತ್ನಗಳ ಉಂಗುರವನ್ನು ಮಾಡಿಸುತ್ತಾರೆ, ಆಗ ವಜ್ರವನ್ನು ಮಧ್ಯದಲ್ಲಿ ಇಡಲಾಗುತ್ತದೆ. ಸಂಗಮದ ಪ್ರತ್ಯಕ್ಷತೆಯಾಗುತ್ತದೆ. ಸಂಗಮಯುಗವು ವಜ್ರ ಸಮಾನವಾಗಿದೆ. ವಜ್ರದ ಮಹತ್ವ ಸಂಗಮಯುಗದಲ್ಲಿದೆ. ಯೋಗ ಮುಂತಾದವುಗಳನ್ನು ಕಲಿಸುತ್ತಾರೆ, ಯಾವುದನ್ನು ಆಧ್ಯಾತ್ಮಿಕ ಯೋಗವಂದು ಹೇಳಲಾಗುತ್ತದೆ. ಆದರೆ ಆತ್ಮಿಕ ತಂದೆಯಂತು ಇದ್ದಾರೆ. ಆತ್ಮಿಕ ತಂದೆ ಮತ್ತು ಆತ್ಮಿಕ ಜ್ಞಾನ ಸಂಗಮದಲ್ಲಿಯೇ ಸಿಗುವುದು. ಮನುಷ್ಯರು ಯಾರಲ್ಲಿ ದೇಹ – ಅಹಂಕಾರವಿದೆ, ಅವರು ಇಷ್ಟು ಬೇಗ ಹೇಗೆ ಒಪ್ಪುವರು. ಬಡವರು ಮುಂತಾದವರಿಗೆ ತಿಳಿಸಿಕೊಡಲಾಗುತ್ತದೆ. ಇದನ್ನು ಸಹ ಬರೆಯಬೇಕು ಸಂಗಮಯುಗವು ವಜ್ರದಯುಗವಾಗಿದೆ. ಅದರ ಆಯಸ್ಸು ಇಷ್ಟು. ಸತ್ಯಯುಗ ಸ್ವರ್ಣಿಮಯುಗ ಅದರ ಆಯಸ್ಸು ಇಷ್ಟು. ಶಾಸ್ತ್ರಗಳಲ್ಲಿಯು ಸ್ವಸ್ತಿಕಾವನ್ನು ಹಾಕುತ್ತಾರೆ. ನೀವು ಮಕ್ಕಳಿಗೆ ಇದು ನೆನಪಿದ್ದರೆ ಎಷ್ಟು ಖುಷಿಯಾಗುತ್ತದೆ. ವಿದ್ಯಾರ್ಥಿಗಳಿಗೆ ಖುಷಿಯಾಗುತ್ತದೆಯಲ್ಲವೇ. ವಿದ್ಯಾರ್ಥಿಗಳ ಜೀವನ ಉತ್ತಮ ಜೀವನ. ಇದಂತು ಸಂಪಾದನಕ್ಕೆ ಆದಾಯವಾಗಿದೆ. ಇದು ಮನುಷ್ಯರಿಂದ ದೇವತೆಗಳಾಗುವ ಪಾಠಶಾಲೆಯಾಗಿದೆ. ದೇವತೆಗಳಂತು ವಿಶ್ವದ ಮಾಲೀಕರಾಗಿದ್ದರು. ಇದು ಸಹ ನಿಮಗೆ ಗೊತ್ತಿದೆ. ಅಂದಾಗ ಅಪಾರಖುಷಿಯಿರಬೇಕು, ಇದಕ್ಕೆ ಗಾಯನವಿದೆ ಅತೀಂದ್ರಿಯ ಸುಖ ಗೋಪಿ ವಲ್ಲಭರ ಗೋಪ ಗೋಪಿಯರನ್ನು ಕೇಳಿ. ಶಿಕ್ಷಕರು ಅಂತಿಮವರೆಗು ಓದಿಸುತ್ತಾರೆಂದರೆ ಅವರನ್ನು ಅಂತಿಮವರೆಗು ನೆನಪು ಮಾಡಬೇಕು. ಭಗವಂತನು ಓದಿಸುತ್ತಾರೆ ಮತ್ತು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ. ಕರೆಯುತ್ತಾರೆ ಮುಕ್ತಿದಾತ, ಮಾರ್ಗದರ್ಶಕ. ದುಃಖಗಳಿಂದ ಬಿಡಿಸಿ. ಸತ್ಯಯುಗದಲ್ಲಿ ದುಃಖವಿರುವುದಿಲ್ಲ. ಹೇಳುತ್ತಾರೆ ವಿಶ್ವದಲ್ಲಿ ಶಾಂತಿಯಿರಲಿ. ಹೇಳಿ, ಮೊದಲು ಯಾವಾಗಿತ್ತು? ಅದು ಯಾವ ಯುಗವಾಗಿತ್ತು? ಯಾರಿಗೂ ಗೊತ್ತಿಲ್ಲ. ರಾಮರಾಜ್ಯ ಸತ್ಯಯುಗ, ರಾವಣ ರಾಜ್ಯ ಕಲಿಯುಗ. ಇದಂತು ತಿಳಿದುಕೊಂಡಿದ್ದೀರಲ್ಲವೇ. ಮಕ್ಕಳಿಗೆ ಅನುಭವ ತಿಳಿಸಬೇಕು. ಹೃದಯದ ಮಾತನ್ನು ಏನು ಹೇಳಲಿ. ಬೇಹದ್ದಿನ ತಂದೆ ಬೇಹದ್ದಿನ ರಾಜ್ಯಭಾರ ಕೊಡುವಂತಹವರು ಸಿಕ್ಕಿದ್ದಾರೆ ಮತ್ತೇನು ಅನುಭವ ತಿಳಿಸುವುದು. ಮತ್ತೆ ಯಾವುದೇ ಮಾತಿಲ್ಲ. ಈ ತರಹದ ಖುಷಿ ಮತ್ತ್ಯಾವುದೇ ಆಗಲು ಸಾಧ್ಯವಿಲ್ಲ. ಎಂದೂ ಯಾರೆದಿಂಗೂ ಮುನಿಸಿಕೊಂಡು ಮನೆಯಲ್ಲಿ ಕುಳಿತುಕೊಳ್ಳುವುದಿಲ್ಲ. ಇದು ತಮ್ಮನ್ನು ಅದೃಷ್ಟದಿಂದ ಮುನಿಸಿಕೊಳ್ಳುವುದಾಗಿದೆ. ವಿದ್ಯೆಯಿಂದ ಮುನಿಸಿಕೊಂಡರೆ ಏನು ಕಲಿಯುವಿರಿ! ತಂದೆಯಂತು ಓದಿಸಲೇಬೇಕು - ಬ್ರಹ್ಮನ ಮೂಲಕ. ಒಬ್ಬರಿನೊಬ್ಬರೊಂದಿಗೆ ಎಂದೂ ಮುನಿಸಿಕೊಳ್ಳಬಾರದು. ಇದು ಮಾಯೆಯಾಗಿದೆ. ಯಜ್ಞದಲ್ಲಿ ಅಸುರರ ವಿಘ್ನವು ಬಿಳುತ್ತದೆಯಲ್ಲವೇ. ಒಳ್ಳೆಯದು!

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಶ್ರೀಮತದನುಸಾರ ಶ್ರೇಷ್ಠಾಚಾರಿಗಳಾಗಿ ಶ್ರೇಷ್ಠಾಚಾರಿಯನ್ನಾಗಿ ಮಾಡುವ ಸೇವೆ ಮಾಡಬೇಕು. ಹೆಸರನ್ನು ಕೆಡಿಸುವಂತಹ

ಚಲನೆಯನ್ನು ನಡೆಸಬಾರದು. ಮುಖದಿಂದ ಸದಾ ರತ್ನಗಳೇ ಹೊರಬರಬೇಕು, ಕಲ್ಲುಗಳಲ್ಲ.

2. ಬೇಹದ್ದಿನ ಗುಹ್ಯವಿದ್ಯೆಯನ್ನು ವಿಸ್ತಾರವಾಗಿ ಕೇಳುತ್ತಾ ಅದನ್ನು ಸಾರರೂಪದಲ್ಲಿ ತಂದು ಅನ್ಯರ ಸೇವೆ ಮಾಡಬೇಕಾಗಿದೆ. ಶ್ರೀಮತದ ಮೇಲೆ ಪೂರ್ಣ ಗಮನ ಕೊಡಬೇಕು.

ವರದಾನ: ತಮ್ಮ ಕರ್ಮ ಮತ್ತು ಸ್ಥಿತಿಯ ಮುಖಾಂತರ ಬ್ರಹ್ಮಾ ತಂದೆಯನ್ನು ಸ್ಪಷ್ಟವಾಗಿ ತೋರಿಸುವಂತಹ ಮಾಸ್ಟರ್ ಬ್ರಹ್ಮಾ ಭವ

ಹೇಗೆ ಬ್ರಹ್ಮಾ ತಂದೆಯ ಮೂಲ ಸಂಸ್ಕಾರ "ಮೊದಲು ನೀವು" ಎನ್ನುವುದಾಗಿತ್ತು. ಯಾವುದೇ ಸ್ಥಾನದಲ್ಲಿ ಮೊದಲು ಮಕ್ಕಳು, ಪ್ರತಿ ಮಾತಿನಲ್ಲಿ ಮಕ್ಕಳನ್ನು ತಮಗಿಂತ ಮುಂದೆ ಇಟ್ಟರು. ಆದರೆ ಕೇವಲ ಹೇಳುವುದಕ್ಕೋಸ್ಕರ ಅಲ್ಲ, ಶುಭಚಿಂತಕ ಭಾವನೆಯಿಂದ. ಅವರೇ ಮಾಡಿದರೂ ಸಹ ಬಾಬಾನ ಸೇವೆ, ನಾನು ಮಾಡಿದರೂ ಸಹ ಬಾಬಾನ ಸೇವೆ. ನಾನು ಮುಂದುವರೆಯಬೇಕು, ಎಂದಲ್ಲ. ಅನ್ಯರನ್ನು ಮುಂದುವರೆಸಿ ಮುಂದುವರೆಯಿರಿ. ಯಾವಾಗ ಈ ಭಾವನೆ ಪ್ರತಿಯೊಬ್ಬರಲ್ಲಿ ಬರುತ್ತೆ ಆಗ ಹೇಳಲಾಗುವುದು ಮಾಸ್ಟರ್ ಬ್ರಹ್ಮಾ. ನಂತರ ಯಾರೂ ಹೀಗೆ ಹೇಳಲ್ಲಾ ನಾನು ಬ್ರಹ್ಮಾ ತಂದೆಯನ್ನು ನೋಡಿಲ್ಲ ಎಂದು. ನಿಮ್ಮ ಕರ್ಮ, ನಿಮ್ಮ ಸ್ಥಿತಿ ಬ್ರಹ್ಮಾ ತಂದೆಯನ್ನು ಸ್ಪಷ್ಟವಾಗಿ ತೋರಿಸಬೇಕು.

ಸ್ಲೋಗನ್: ಏಕಾಗ್ರತೆಯ ದೃಢ ಸಂಕಲ್ಪದಿಂದ ಸಾಗರದ ಆಳದಲ್ಲಿ ಹೋಗಿಬಿಡಿ ಆಗ ಅನುಭವದ ವಜ್ರ, ಮುತ್ತು ಪ್ರಾಪ್ತಿಯಾಗುವುದು.